ಸೆಲೆಬ್ರಿಟಿ

# ರೊನಾಲ್ಡೊ ಸಂಕಷ್ಟದಲ್ಲೂ ಸುಗ್ಗಿ

ಜಗತ್ತೇ ಕೊರೊನಾ ವೈರಸ್‌ನ ದಾಳಿಗೆ ಸಿಕ್ಕು ಹೈರಾಣಾಗಿದೆ. ಕ್ರೀಡಾಲೋಕವೂ ಇದರಿಂದ ಹೊರತಲ್ಲ. ಹಣದ ಹೊಳೆಯೇ ಹರಿಯುವ ಫುಟ್‌ಬಾಲ್ ಕ್ಷೇತ್ರವೂ ಪಂದ್ಯಗಳಿಲ್ಲದೆ ಖಾಲಿ ಕುಳಿತಿದೆ. ಅಷ್ಟಾಗಿಯೂ ಫುಟ್‌ಬಾಲ್ ರಂಗದಲ್ಲಿ ಸೂಪರ್‌ಸ್ಟಾರ್ ಆಟಗಾರರ ಹಣದ ಲೆಕ್ಕಾಚಾರ ನಿಂತಿಲ್ಲ. ಯಾವ ಸ್ಟಾರ್‌ನನ್ನು ಎಷ್ಟಕ್ಕೆ ಮಾರಾಟ ಮಾಡಬಹುದು, ಎಷ್ಟಕ್ಕೆ ಖರೀದಿಸಬಹುದು ಎನ್ನುವ ಲೆಕ್ಕಾಚಾರ ಜೋರಾಗಿ ನಡೆದಿದೆ. ಫುಟ್‌ಬಾಲ್‌ನಲ್ಲಿ ಹಣದ ಪ್ರಶ್ನೆ ಬಂದಾಗ ಮೊದಲು ಬರುವ ಹೆಸರೇ ಕ್ರಿಶ್ಚಿಯಾನೋ ರೊನಾಲ್ಡೊನದ್ದು. ಏಕೆಂದರೆ ಆತ ಜಗತ್ತಿನಲ್ಲೇ ಅತ್ಯಧಿಕ ಆದಾಯ ಗಳಿಸುತ್ತಿರುವ ನಂಬರ್ ಒನ್ ಕ್ರೀಡಾಪಟು. ಸಾಮಾಜಿಕ ಜಾಲತಾಣದಲ್ಲಿ ಜಗತ್ತಿನಲ್ಲೇ ಅತ್ಯಧಿಕ ಎನ್ನಲಾದ 40 ಕೋಟಿ ಹಿಂಬಾಲಕರನ್ನು ಹೊಂದಿರುವ ಖ್ಯಾತಿ ಈತನದ್ದು. ಕೊರೊನಾದಿಂದಾಗಿ ಎಲ್ಲ ಸೂಪರ್‌ಸ್ಟಾರ್ ಆಟಗಾರರ ಆದಾಯ ಗಳಿಕೆಯ ಗ್ರಾಫ್ ತೀವ್ರ ಕುಸಿತ ಕಂಡಿದ್ದರೂ ರೊನಾಲ್ಡೊ ಈಗಲೂ ಪಟ್ಟಿಯಲ್ಲಿ ನಂಬರ್ ಒನ್ ಸ್ಥಾನವನ್ನು ಉಳಿಸಿಕೊಂಡಿದ್ದಾನೆ. ಅಂತರರಾಷ್ಟ್ರೀಯ ಫುಟ್‌ಬಾಲ್ ಸಂಘಟನೆ ಫಿಫಾದ ವರ್ಷದ ಅತ್ಯುತ್ತಮ ಆಟಗಾರ ಪ್ರಶಸ್ತಿಯನ್ನು ಈಗಾಗಲೇ ಐದು ಬಾರಿ ಗೆದ್ದುಕೊಂಡಿರುವ ರೊನಾಲ್ಡೊ, ಯೂರೋಪಿಯನ್ ಫುಟ್‌ಬಾಲ್ ಲೀಗ್ ಪಂದ್ಯಗಳಲ್ಲಿ ಅತ್ಯಧಿಕ ಗೋಲ್ ಹೊಡೆದಿರುವ ಸಾರ್ವಕಾಲಿಕ ದಾಖಲೆ ಹೊಂದಿರುವಾತ.

ಇಷ್ಟೆಲ್ಲಾ ಪೀಠಿಕೆ ಏಕೆಂದರೆ, ಈ ಕೊರೊನಾ ಸಂಕಷ್ಟ ಕಾಲದಲ್ಲೂ ರೊನಾಲ್ಡೊನನ್ನು ಖರೀದಿಸುವ ಮತ್ತು ಕೊಳ್ಳುವ ಯತ್ನ ಭರದಿಂದ ನಡೆದಿದೆ. 9 ವರ್ಷಗಳ ಕಾಲ ರಿಯಲ್ ಮ್ಯಾಡ್ರಿಡ್ ಕ್ಲಬ್‌ನಲ್ಲಿದ್ದ ರೊನಾಲ್ಡೊ, 2018ರಲ್ಲಿ ಜುವೆಂಟಸ್ ಕ್ಲಬ್‌ಗೆ ಮಾರಾಟವಾದ. ಆಗ ವಾರದ ಆದಾಯ ಹೊರತುಪಡಿಸಿ, ಆತ ಮಾರಾಟವಾಗಿದ್ದು ವಾರ್ಷಿಕ 640 ಲಕ್ಷ ಡಾಲರ್ ಮೊತ್ತಕ್ಕೆ. ಅದು ನಾಲ್ಕು ವರ್ಷಗಳ ಒಪ್ಪಂದ. ಅದಾಗಲೇ ಈತನ ಖ್ಯಾತಿ ಎಷ್ಟು ಉತ್ತುಂಗಕ್ಕೆ ಏರಿತ್ತೆಂದರೆ, ಜುವೆಂಟಸ್ ಸೇರಿದ 24 ಗಂಟೆಗಳಲ್ಲೇ ಈತನ ಫೋಟೊ ಇರುವ 5,20,000 ಜರ್ಸಿಗಳು ಮಾರಾಟವಾಗಿ, ಆ ಕ್ಲಬ್‌ಗೆ 60 ದಶಲಕ್ಷ ಡಾಲರ್ ಆದಾಯ ಬಂದಿತ್ತು. ಈಗ ರಿಯಲ್ ಮ್ಯಾಡ್ರಿಡ್ ಈತನನ್ನು ಮರು ಖರೀದಿಸುವ ಯತ್ನಕ್ಕೆ ಕೈಹಾಕಿದೆ.

ಜುವೆಂಟಸ್ ಕ್ಲಬ್‌ಗೂ ಈಗ ದುಡ್ಡಿನ ಅವಶ್ಯಕತೆ ಇದೆ. ಕೊರೊನಾ ವೈರಸ್‌ನಿಂದಾಗಿ ಪಂದ್ಯಗಳೆಲ್ಲ ರದ್ದಾಗಿ ಅದು ಸಾಕಷ್ಟು ನಷ್ಟವನ್ನೂ ಅನುಭವಿಸುತ್ತಿದೆ. ರೊನಾಲ್ಡೊನನ್ನು ಸಾಕುವ ಬದಲು ಮಾರಿದರೇ ಹೆಚ್ಚು ಲಾಭ ಎನ್ನುವುದು ಆ ಕ್ಲಬ್‌ನ ಲೆಕ್ಕಾಚಾರ. ವಾಸ್ತವವಾಗಿ 2022ರವರೆಗೆ ರೊನಾಲ್ಡೊ ಜೊತೆಗೆ ಕ್ಲಬ್‌ನ ಒಪ್ಪಂದವಿದೆ. 2018ರಲ್ಲಿ ಜುವೆಂಟಸ್ ಈತನನ್ನು ಖರೀದಿಸಿದ್ದು 100 ದಶಲಕ್ಷ ಪೌಂಡ್‌ಗೆ. ಇದರ ಜೊತೆಗೆ ವಾರಕ್ಕೆ 5,10,000 ಪೌಂಡ್ ಸಂಬಳ ಪ್ರತ್ಯೇಕ. ಈಗ ಜುವೆಂಟಸ್ ಈತನನ್ನು ರಿಯಲ್ ಮ್ಯಾಡ್ರಿಡ್‌ಗೆ 50 ದಶಲಕ್ಷ ಪೌಂಡ್‌ಗೆ ಮಾರಲು ಸಿದ್ಧವಿದೆ ಎನ್ನುವುದು ಸುದ್ದಿ.

ಮ್ಯಾಡ್ರಿಡ್ ಕ್ಲಬ್‌ಗೆ ರೊನಾಲ್ಡೊನ ಮಹತ್ವ ಗೊತ್ತಿದೆ. ಈ ಹಿಂದೆ ಈತ ಮ್ಯಾಡ್ರಿಡ್ ಸೇರಿಕೊಂಡ ಬಳಿಕ ಆ ಕ್ಲಬ್ ಈತನ ನೇತೃತ್ವದಲ್ಲಿ ನಾಲ್ಕು ಬಾರಿ ಚಾಂಪಿಯನ್ಸ್ ಲೀಗ್ ಪ್ರಶಸ್ತಿ ಸಹಿತ ಒಟ್ಟು ಎಂಟು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದುಕೊಂಡಿತ್ತು. ಅದೇ ರೀತಿ ಜುವೆಂಟಸ್ ಕೂಡಾ ಈತನಿಂದ ಲಾಭ ಪಡೆದಿದೆ. ರೊನಾಲ್ಡೊನನ್ನು 2018ರಲ್ಲಿ ಸೇರಿಸಿಕೊಳ್ಳುವುದಕ್ಕಿಂತ ಮುಂಚೆ ಜುವೆಂಟಸ್ 14 ವರ್ಷಗಳ ಕಾಲ ಯೂರೋಪಿಯನ್ ಚಾಂಪಿಯನ್ಸ್ ಟ್ರೋಫಿ ಗೆಲ್ಲಲಾಗದೆ ಒದ್ದಾಡುತ್ತಿತ್ತು. ರೊನಾಲ್ಡೊ ಸೇರ್ಪಡೆಯಾದ ಮರುವರ್ಷವೇ ಜುವೆಂಟಸ್ ಆ ಟ್ರೋಫಿ ಕೈಗೆತ್ತಿಕೊಂಡಿತ್ತು. ಸ್ವತಃ ಗೋಲು ಗಳಿಸುವುದು ಮಾತ್ರ ರೊನಾಲ್ಡೊ ಹೆಗ್ಗಳಿಕೆಯಲ್ಲ. ಮಿಂಚಿನ ಆಕ್ರಮಣದಿಂದ ಎದುರಾಳಿ ಗೋಲು ಆವರಣಕ್ಕೆ ನುಗ್ಗಿ ಸಹ ಆಟಗಾರನಿಗೆ ಗೋಲು ಗಳಿಸಲು ಪಾಸ್ ನೀಡುವುದರಲ್ಲೂ ರೊನಾಲ್ಡೊನದ್ದು ಎತ್ತಿದ ಕೈ. 35ರ ಈ ವಯಸ್ಸಲ್ಲೂ ರೊನಾಲ್ಡೊ ಓಟದ ವೇಗ ಕಡಿಮೆಯಾಗಿಲ್ಲ.




ಯೂರೋಪಿಯನ್ ಫುಟ್‌ಬಾಲ್‌ನಲ್ಲಿ ಬಲೂನ್ ಡಿ ಓರ್ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿ. ಇಡೀ ವರ್ಷದ ಆಟವನ್ನು ತೂಗಿ ನೋಡಿ ಒಬ್ಬನನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ರೊನಾಲ್ಡೊ ಐದು ಬಾರಿ ಈ ಪ್ರಶಸ್ತಿಯನ್ನು ಗೆದ್ದಿದ್ದಾನೆ. ನಾಲ್ಕು ಬಾರಿ ಯೂರೋಪಿಯನ್ ಟೂರ್ನಿಗಳ ಗೋಲ್ಡನ್ ಶೂ ಪ್ರಶಸ್ತಿ ಗಳಿಸಿದ್ದಾನೆ. ಯೂರೋಪಿಯನ್ ಒಕ್ಕೂಟದ ಚಾಂಪಿಯನ್ಸ್ ಲೀಗ್‌ನಲ್ಲಿ ಅತ್ಯಧಿಕ ಗೋಲು (128) ಬಾರಿಸಿದ ದಾಖಲೆ ಇವನ ಹೆಸರಿನಲ್ಲಿದೆ. ಪೋರ್ಚುಗಲ್ ದೇಶದ ಫುಟ್‌ಬಾಲ್ ತಂಡದ ನಾಯಕನೂ ಆಗಿರುವ ಈತ, 1000ಕ್ಕೂ ಹೆಚ್ಚು ವೃತ್ತಿಪರ ಫುಟ್‌ಬಾಲ್ ಪಂದ್ಯಗಳಲ್ಲಿ ಆಟವಾಡಿದ ಕೀರ್ತಿವಂತ. ಸೀನಿಯರ್ ಪಂದ್ಯಗಳಲ್ಲಿ ತನ್ನ ಕ್ಲಬ್ ಮತ್ತು ದೇಶದ ಪರವಾಗಿ ಒಟ್ಟು 700ಕ್ಕೂ ಹೆಚ್ಚು ಗೋಲು ಗಳಿಸಿದ ಹೆಮ್ಮೆ ಈತನದ್ದು. 18ರ ಹರೆಯದಲ್ಲಿ 2003ರಲ್ಲಿ ಸೀನಿಯರ್ ಲೀಗ್ ಪಂದ್ಯಗಳಿಗೆ ಪ್ರವೇಶ ಪಡೆದ ಈತ ಪೋರ್ಚುಗಲ್ ಕಂಡಿರುವ ಸಾರ್ವಕಾಲಿಕ ಶ್ರೇಷ್ಠ ಆಟಗಾರ. ಪೋರ್ಚ್‌ಗೀಸ್ ಫುಟ್‌ಬಾಲ್ ಫೆಡರೇಷನ್ ಆ ಬಿರುದನ್ನು ಈತನಿಗೆ 2015ರಲ್ಲೇ ಘೋಷಿಸಿದೆ. 2008ರಲ್ಲಿ ಈತ ಪೋರ್ಚುಗಲ್ ರಾಷ್ಟ್ರೀಯ ತಂಡದ ನಾಯಕನಾದ ಬಳಿಕ, 2016ರಲ್ಲಿ ಆ ದೇಶ ಮೊದಲ ಬಾರಿಗೆ ಯೂರೋ ಚಾಂಪಿಯನ್ ಎನ್ನಿಸಿಕೊಂಡಿತು.

ರಿಯಲ್ ಮ್ಯಾಡ್ರಿಡ್ ಈತನ ಖರೀದಿಗೆ ಮುಂದಾಗಿರುವುದು ನಿಜ. ಆದರೆ ಈತನಿಗಿಂತ ಕಡಿಮೆ ದರಕ್ಕೆ ಸೈಂಟ್ ಜರ್ಮೇನ್ ಕ್ಲಬ್‌ನ ಸೂಪರ್‌ಸ್ಟಾರ್ ಎಂಬಾಪ್ಪೆ ಸಿಗಬಹುದೆ ಎಂದೂ ತೂಗಿನೋಡುತ್ತಿದೆಯಂತೆ!

■ ಹನಿ


Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008,


©All rights reserved. Reproduction in whole or in part without permission is prohibited.


RNI No 7891/65